ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

24

ಇಲಾಖೆ / ವಿಷಯ : DEPARTMENT / SUBJECT: ಗೃಹ - ಸಿ. ಡಿ. ಪ್ರಕರಣ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 26/3/21

24 ದಿನಗಳ ಚಕ್ರವ್ಯೂಹ ಭೇದಿಸಲು ವಿಫಲ | ಅಜ್ಞಾತ ಸ್ಥಳದಿಂದಲೇ ಸಂತ್ರಸ್ತೆ ಸ್ಫೋಟಕ ಹೇಳಿಕೆ

# ಕರ್ನಾಟಕ ಪೊಲೀಸ್‌ಗೆ ಸಿಡಿ ಲಲನೆ ಸವಾಲು

26/3/21

ಸಂ.ಕ.ಸಮಾಚಾರ ಬೆಂಗಳೂರು

ಮಾಜಿ ಸಚಿವ ರಮೇಶ್ ಜಾರಕಿಹೊಳಿ ವಿರುದ್ಧದ ರಾಸಲೀಲೆ ಸಿಡಿ ಹಗರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ದಳದ (ಎಸ್‌ಐಟಿ) ಸಾಚಾತನದ ಬಗ್ಗೆಯೇ ಪ್ರಶ್ನೆ ಮಾಡಿರುವ ಸಿಡಿಯಲ್ಲಿದ್ದಾಳೆ ಎನ್ನಲಾದ ಯುವತಿ, ಗುರುವಾರ ಅಜ್ಞಾತಸ್ಥಳದಿಂದ ಎರಡನೇ ಬಾರಿಗೆ ವಿಡಿಯೋ ಬಿಡುಗಡೆ ಮಾಡಿದ್ದಾಳೆ. ಇದೀಗ ಪ್ರಕರಣ ಕರ್ನಾಟಕ ಪೊಲೀಸ್ ಇತಿಹಾಸದಲ್ಲೇ ಭಾರಿ ಸವಾಲು ಎದುರಾಗಿದೆ. ಆರು ಮಂದಿ ಐಪಿಎಸ್ ಅಧಿಕಾರಿಗಳು, 12 ಮಂದಿ ಕೆಎಸ್‌ಪಿಎಸ್ ಅಧಿಕಾರಿಗಳು, ಹತ್ತಾರು ಸಿಬ್ಬಂದಿಗಳು, ಬೆರಳತುದಿಯಲ್ಲೇ ಸೈಬರ್ ತಜ್ಞರು, ಇಡೀ ಸರ್ಕಾರಿ ವ್ಯವಸ್ಥೆ ಹೀಗೆ ಎಲ್ಲ ಸಕಲ-ಸವಲತ್ತುಗಳನ್ನು ಹೊಂದಿರುವ ಎಸ್‌ಐಟಿಗೆ ಯುವತಿ ಹಾಗೂ ಶಂಕಿತ ಆರೋಪಿಗಳು ಮೇಲಿಂದ ಮೇಲೆ ವಿಡಿಯೋ ಹೇಳಿಕೆಗಳನ್ನು ರವಾನಿಸುತ್ತಿದ್ದರೂ ಏನೂ ಮಾಡದ ಅಸಹಾಯಕ ಸ್ಥಿತಿಯಲ್ಲಿ ಪೊಲೀಸರು ಸಿಲುಕಿದ್ದಾರೆ.

→ 5



ಕಾಮಪುರಾಣ

- ಮ್ಯಾರಾಥಾನ್ ಸಭೆ ನಡೆಸಿದ ಎಸ್‌ಐಟಿ
- ನನ್ನ ಜೇಬಿನಲ್ಲೇ ಸಾಕ್ಷಿ ಇದೆ : ರಮೇಶ್
- ಇಂತಹ ಬೆಳವಣಿಗೆ ಸಹಜ :ಬೊಮ್ಮಾಯಿ

## ಆಕೆಯ ವಿಡಿಯೋ ಬಂದಿಲ: ಕಮಲ್ ಪಂತ್

ರಾಸಲೀಲೆ ಸಿಡಿ ಹಗರಣದಲ್ಲಿ ಶಾಮೀಲಾಗಿದ್ದಾಳೆ ಎನ್ನಲಾದ ಯುವತಿಯು ತಮಗೆ ಅಥವಾ ಎಸ್‌ಐಟಿಗೆ ಯಾವುದೇ ರೀತಿಯ ವಿಡಿಯೋ ರವಾನೆ ಮಾಡಿರಲಿಲ್ಲ. ಈ ಬಗ್ಗೆ ಯುವತಿ ಸುಳ್ಳು ಹೇಳುತ್ತಿದ್ದಾಳೆ ಎಂದು ಬೆಂಗಳೂರು ಪೊಲೀಸ್ ಆಯುಕ್ತ ಕಮಲ್ ಪಂತ್ ಸ್ಪಷ್ಟನೆ ನೀಡಿದ್ದಾರೆ. ಸಂತ್ರಸ್ತೆ ವಿಡಿಯೋ ಹೇಳಿಕೆ ನೀಡಿದ ಬೆನ್ನಲ್ಲೇ ಮಾಧ್ಯಮಗಳ ಜತೆ ಮಾತನಾಡಿದ ಪಂತ್, ನನಗಾಗಲೀ, ನಮ್ಮ ಕಚೇರಿಗಾಗಲಿ ಅಥವಾ ಎಸ್‌ಐಟಿಯ ಯಾವುದೇ ಅಧಿಕಾರಿಗಳಿಗಾಗಲಿ ಆ ಯುವತಿ ಮಾರ್ಚ್ 13ರಂದು ವಿಡಿಯೋ ರವಾನಿಸಿಲ್ಲ. ಆಕೆ ಸುಳ್ಳು ಹೇಳುತ್ತಿದ್ದಾಳೆ. ಒಂದು ವೇಳೆ ವಿಡಿಯೋ ಬಂದಿದ್ದರೆ ಅವತ್ತೇ ನಾವು ಬಹಿರಂಗ ಮಾಡುತ್ತಿದ್ದೆವು. ಅಲ್ಲದೇ ಆಕೆಗೆ ಈಗಾಗಲೇ ಐದು ಬಾರಿ ನೋಟಿಸ್ ಕೊಟ್ಟು ಹೇಳಿಕೆ ದಾಖಲಿಸುವಂತೆ ತಿಳಿಸಿದ್ದೇವೆ. ಆಕೆ ಇರುವ ಜಾಗಕ್ಕೆ ಹೋಗಿ, ಮಹಿಳಾ ಸಿಬ್ಬಂದಿ ಸಮ್ಮುಖದಲ್ಲಿ ಆಕೆಯ ಹೇಳಿಕೆ ದಾಖಲಿಸುವುದಾಗಿ ತಿಳಿಸಿದ್ದೇವೆ. ಆಕೆಗೆ ಯಾವ ರೀತಿಯ ಭದ್ರತೆ ಬೇಕೋ ಅದೆಲ್ಲವನ್ನೂ ಕೊಡಲು ನಾವು ಸಿದ್ಧರಿದ್ದೇವೆ. ಆದರೆ ಆಕೆ ಹೇಳಿಕೆ ಕೊಡಲು ಮುಂದೆ ಬಾರದೇ ವಿಡಿಯೋ ಕಳಿಸುತ್ತಿದ್ದಾಳೆ. ನಾವು ಈಗಲೂ ಈ ವಿಚಾರದಲ್ಲಿ ಮುಕ್ತರಿದ್ದೇವೆ. ಆಕೆಯ ಹೇಳಿಕೆ ದಾಖಲಿಸಿ, ಸತ್ಯಾಂಶ ಕಂಡುಹಿಡಿಯಲು ತನಿಖೆ ನಡೆಸುತ್ತೇವೆ ಎಂದು ಹೇಳಿದರು. ಅದಾದ ಬಳಿಕ ಎಸ್‌ಐಟಿ ಸದಸ್ಯರ ಜತೆ ಸರಿಸುಮಾರು ಎರಡು ಗಂಟೆಗಳ ಕಾಲ ಸತತ ಸಭೆ ನಡೆಸಿದ ಕಮಲ್ ಪಂತ್, ಪ್ರಕರಣವನ್ನು ಆದಷ್ಟು ಬೇಗ ಇತ್ಯರ್ಥಪಡಿಸಲು ಹಾಗೂ ಇದರ ಸತ್ಯಾಸತ್ಯತೆ ಹೊರಬರುವಂತೆ ಕೆಲಸ ಮಾಡಲು ಅಧಿಕಾರಿಗಳಿಗೆ ಸೂಚಿಸಿದರು. ಜಂಟಿ ಪೊಲೀಸ್ ಆಯುಕ್ತ ಸಂದೀಪ್ ಪಾಟೀಲ್, ಡಿಸಿಪಿಗಳಾದ ಅನುಚೇತ್, ರವಿಕುಮಾರ್ ಮತ್ತಿತರ ಅಧಿಕಾರಿಗಳು ಪಾಲ್ಗೊಂಡಿದ್ದರು.

## ಜೇಬಿನಲೇ ಸಾಕ್ಷಿ ಇದೆ : ರಮೇಶ್ ಅಚ್ಚರಿ ಹೇಳಿಕೆ

ಬೆಂಗಳೂರು: ನನ್ನ ಜೇಬಿನಲ್ಲೇ ಬಹುದೊಡ್ಡ ಸಾಕ್ಷಿ ಇದೆ. ಅದನ್ನು ತೋರಿಸಿದರೆ ನೀವೂ ಕೂಡ ಶಾಕ್ ಆಗುತ್ತೀರಿ. ನನ್ನ ವಿರುದ್ಧ ಆ ಮಹಿಳೆ ಇನ್ನೂ 10 ವಿಡಿಯೋ ಬಿಡುಗಡೆ ಮಾಡಿದರೂ ನಾನು ಹೆದರುವುದಿಲ್ಲ. ಅಂತಹ ದೊಡ್ಡ ಸಾಕ್ಷಿ ನನ್ನ ಬಳಿ ಇದೆ. ಆದರೆ ಕಾನೂನು ಪ್ರಕಾರವೇ ಎಲ್ಲ ತೀರ್ಮಾನ ಆಗುವವರೆಗೆ ನಾನು ಕಾಯುತ್ತೇನೆ ಎಂದು ಮಾಜಿ ಸಚಿವ ರಮೇಶ್ ಜಾರಕಿಹೊಳಿ ಸ್ಫೋಟಕ ಹೇಳಿಕೆ ನೀಡಿದ್ದಾರೆ. ಯುವತಿ ವಿಡಿಯೋ ಬಿಡುಗಡೆ ಮಾಡಿದ ಬಳಿಕ ಹೇಳಿಕೆ ನೀಡಿದ ಅವರು, ನಾನು ಮಹಾನ್ ನಾಯಕನ ವಿರುದ್ಧ ಈಗ ಆರೋಪ ಮಾಡುವುದಿಲ್ಲ. ಆದರೆ ನನಗೆ ಸಿಕ್ಕಿರುವ ಸಾಕ್ಷಿ ಪ್ರಕಾರ, ಮಹಾನ್ ನಾಯಕ ಯಾರೆಂಬುದು ಗೊತ್ತಾಗಲಿದೆ. ನಮ್ಮ ವಕೀಲರು ಪ್ರಕರಣದಲ್ಲಿ ಭಾರಿ ಸಾಕ್ಷಿ ಸಂಗ್ರಹಿಸಿದ್ದಾರೆ. ಕಾನೂನು ಹೋರಾಟದಲ್ಲಿ ನಾನು ನಿರಪರಾಧಿಯಾಗಿ ಹೊರಗೆ ಬರುತ್ತೇನೆ. ನನಗೆ ಯಾರ ಮೇಲೂ ದ್ವೇಷ ಸಾಧಿಸಬೇಕಾಗಿಲ್ಲ ಎಂದು ಹೇಳಿದರು. ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅವರು ಸದನದಲ್ಲಿ ನನ್ನ ವಿರುದ್ಧ ರೇಪ್ ಪ್ರಕರಣ ದಾಖಲಿಸಬೇಕೆಂದು ಹೇಳಿರುವುದು ನನ್ನ ಮನಸಿಗೆ ತುಂಬಾ ನೋವನ್ನುಂಟು ಮಾಡಿದೆ. ಸಿದ್ದರಾಮಯ್ಯ ಅವರಿಗೆ ದೇವರು ಒಳ್ಳೆಯದನ್ನು ಮಾಡಲಿ ಎಂದಷ್ಟೇ ಹೇಳುವೆ ಎಂದು ಗದ್ಗದಿತರಾದರು.

## ಭದ್ರತೆ ನೀಡಲು ಸಿದ್ಧ: ಬೊಮ್ಮಾಯಿ

ಬೆಂಗಳೂರು: ಯುವತಿ ವಿಡಿಯೋ ಬಿಡುಗಡೆ ಮಾಡಿರುವ ವಿಚಾರ ಗಮನಕ್ಕೆ ಬಂದಿದೆ. ಆಕೆ ಹೇಳಿದಂತೆ ಆಕೆಯ ಕುಟುಂಬದ ಸದಸ್ಯರಿಗೆ ಹಾಗೂ ಆಕೆಗೂ ಅಗತ್ಯ ಭದ್ರತೆ ನೀಡಲು ಸರ್ಕಾರ ಬದ್ಧವಾಗಿದೆ. ಈ ಬಗ್ಗೆ ಯಾವುದೇ ಸಂಶಯ ಬೇಡ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು. ಒಂದು ಪ್ರಕರಣದ ತನಿಖೆ ನಡೆಯುವ ವೇಳೆ ಹಲವಾರು ಬೆಳವಣಿಗೆಗಳು ಆಗುವುದು ಸಹಜ ಪ್ರಕ್ರಿಯೆ. ಹಲವಾರು ತಿರುವುಗಳು ಆಗುತ್ತಿರುತ್ತವೆ. ಈಗಾಗಲೇ ಹೇಳಿದಂತೆ ಆ ಮಹಿಳೆ ಇದ್ದ ಜಾಗಕ್ಕೆ ಹೋಗಿ ಹೇಳಿಕೆ ಪಡೆಯಲು ಪೊಲೀಸರಿಗೆ ಸೂಚಿಸಲಾಗಿದೆ. ಆದರೆ ಆಕೆ ತಾನಿರುವ ಜಾಗದ ಬಗೆಗೆ ಮಾಹಿತಿ ನೀಡುತ್ತಿಲ್ಲ. ಈ ಯುವತಿ ಸಿದ್ದರಾಮಯ್ಯ ಹಾಗೂ ಡಿಕೆ ಶಿವಕುಮಾರ್ ಅವರಿಂದ ರಕ್ಷಣೆ ಕೇಳಿರೋ ವಿಚಾರ ನನಗೆ ಗೊತ್ತಿಲ್ಲ. ಆ ಬಗ್ಗೆ ಅವರನ್ನೇ ಕೇಳಬೇಕು ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆ ನೀಡಿದರು.

25

# ಸಿಡಿ ಲೇಡಿ ಸವಾಲ್

(ಒಂದನೇ ಪುಟದಿಂದ) ವಿ.ಕ 26/3/21

ಸಾಲದ್ದಕ್ಕೆ, ಎಸ್‌ಐಟಿ ಯಾರ ಪರವಾಗಿ ಕೆಲಸ ಮಾಡುತ್ತಿದೆ ಎಂಬುದೇ ಗೊತ್ತಾಗುತ್ತಿಲ್ಲ ಎಂದು ಯುವತಿ ನೇರವಾಗಿ ಎಸ್‌ಐಟಿಯ ಸಾಚಾತನ ಪ್ರಶ್ನೆ ಮಾಡಿದ್ದಾರೆ.

ಕಳೆದ ಮೂರು ದಿನಗಳಿಂದ ವಿಧಾನಸಭೆಯಲ್ಲಿ ವಿರೋಧ ಪಕ್ಷ ಕಾಂಗ್ರೆಸ್, ಮಾಜಿ ಸಚಿವ ರಮೇಶ್ ಜಾರಕಿಹೊಳಿ ವಿರುದ್ಧ ಧರಣಿ ನಡೆಸಿರುವುದನ್ನು ಅರಿತಂತಿರುವ ಯುವತಿ, ನನ್ನ ಕುಟುಂಬದ ಸದಸ್ಯರಿಗೆ ರಕ್ಷಣೆ ಕೊಡಿಸುವುದನ್ನು ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಹಾಗೂ ರಮೇಶ್ ಕುಮಾರ್ ಅವರು ಖಚಿತಪಡಿಸಿದರೆ ನಾನೇ ನೇರವಾಗಿ ಬಂದು ಎಸ್‌ಐಟಿಗೆ ಹೇಳಿಕೆ ನೀಡುತ್ತೇನೆ ಎಂದೂ ಹೇಳಿರುವುದು ಇದೀಗ ಸರ್ಕಾರವನ್ನು ದಿಕ್ಕೆಡುವಂತೆ ಮಾಡಿದೆ.

ಅಜ್ಞಾತ ಸ್ಥಳದಿಂದ ಬಿಡುಗಡೆ ಮಾಡಿರುವ ಒಂದೂವರೆ ನಿಮಿಷಗಳ ವಿಡಿಯೋ ಹೇಳಿಕೆಯಲ್ಲಿ ಯುವತಿಯು ಎಸ್‌ಐಟಿಗೆ ತಾನು ಮಾರ್ಚ್ 13ರಂದೇ ವಿಡಿಯೋ ರವಾನಿಸಿದ್ದರೂ ಅದನ್ನು ಮುಚ್ಚಿಡಲಾಗಿತ್ತು. ಮಾರ್ಚ್ 14ರಂದು ಮಾಜಿ ಸಚಿವ ರಮೇಶ್ ಜಾರಕಿಹೊಳಿ ದೂರು ದಾಖಲಿಸಿದ ನಂತರ ನನ್ನ ವಿಡಿಯೋ ಬಿಡುಗಡೆ ಮಾಡಲಾಗಿದೆ. ಹೀಗಾಗಿ ಎಸ್‌ಐಟಿ ಯಾರಪರ ಕೆಲಸ ಮಾಡುತ್ತಿದೆ ಎಂಬುದು ಗೊತ್ತಾಗುತ್ತದೆ ಎಂದು ಗಂಭೀರ ಆರೋಪ ಮಾಡಿದ್ದಾಳೆ.